ನರಸಿಂಹಾರೆಡ್ಡಿ ಯಂಕಾಮೊಳ, ಸೇಡಂ
ಈ 'ನೆಟ್ಟಿಗರು' ಅಂದ್ರೆ ಯಾರು ಸಾರ್?



ಸಾಮಾಜಿಕ ಜಾಲತಾಣದಲ್ಲೇ ಕಣ್ಣು ನೆಟ್ಟು ಕೂತವರು.

ಎಂ.ಟಿ. ರಮಾನಂದರೆಡ್ಡಿ, ಮದಕರಿಪುರ
ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ. ಇರದಿದ್ದರೆ?
ನೆಮ್ಮದಿಗೆ ಗುಡ್‌ಬೈ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ರುಚಿಗೂ ಅಭಿರುಚಿಗೂ ವ್ಯತ್ಯಾಸವೇನು?
ಗ್ರಂಥಿಗಳಿಂದ ರುಚಿ; ಗ್ರಂಥಗಳಿಂದ ಅಭಿರುಚಿ.

ಅನಸೂಯ ಟಿ, ಕೇದಿಗೆಮನೆ
ಮತ್ತೆ ರಾಜರ ಆಳ್ವಿಕೆ ಮರಳಿದರೆ?
ಈಗಿರುವುದೂ ಅದೇ; ಹೆಸರಿಗೆ ಪಕ್ಷಗಳು; ಆಳುತ್ತಿರುವುದು ಡೆಮಾಕ್ರಸಿಯ ಪಿತೃಪಕ್ಷಗಳು.

ಮಲ್ಲಿಕಾರ್ಜುನ, ಸುರಧೇನುಪುರ
ಹೆಂಡ ಮುಖ್ಯ ದ್ರವ, ಹೆಂಡತಿ ಉಪದ್ರವ ಎನ್ನುತ್ತಿದ್ದಾನಲ್ಲಾ...?



ಆದ್ದರಿಂದಲೇ ಸತಿ ಜೀವಿ, ಪತಿ ಅವಳ ಉಪಜೀವಿ ಆಗಿರುವುದಂತೆ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ವಿಶ್ವವಿಖ್ಯಾತ ಸೋಲಾರ್ ನಮ್ಮಲ್ಲರಳಿದ್ದರೂ ಪವರ್ ಕಟ್‌ಗಳು ನಮ್ಮನ್ನು ಮೆಟ್ಟಿ ನಿಂತಿವೆ. ಭಾಷ್ಯ ಬರೀತೀಯಾ ರಾಮ್?
ಭ್ರಷ್ಟಾಚಾರದ ಮೋಡ ಕವಿದ ವಾತಾವರಣದಲ್ಲಿ ಸೋಲಾರ್ ಸೋಲೊಪ್ಪಿದೆ.

ಬಿ.ಆರ್. ಉಷಾ, ಬೆಂಗಳೂರು
ಬಸ್ಸಿನಲ್ಲಿ ಹೆಂಗಸರನ್ನು ಮುಂದೆ ಕೂಡಿಸುವುದೇಕೆ?
ಹಿಂದೆ ಕೂಡಿಸಿದರೆ ಡ್ರೈವರ್ ಸಮೇತ ಎಲ್ಲರೂ ಅತ್ತಲೇ ತಿರುಗಿ ಕೂಡುವರೆಂಬ ಭಯ.

ಸುಮಾ ರಮೇಶ್, ಹಾಸನ
ಕೊರೊನಾ ನಾಲ್ಕನೆಯ ಅಲೆ ಬಂದರೆ ಹಿಜಾಬ್ ವಿವಾದ ತಣ್ಣಗಾಗಬಹುದೆ?
ಅದಕ್ಕೆ ಬೇಕಾದ್ದು ನಾಲ್ಕನೆಯ ಅಲೆಯಲ್ಲ; ಸಾಮರಸ್ಯದ ಕಲೆ.

ಫಾಲನೇತ್ರ ಸಜ್ಜನ, ಶಿರಸಿ
ಹುಳಿ, ಉಪ್ಪು, ಖಾರವನ್ನು ಮೀರಿಸಿ ಮಧುಮೇಹಿಗಳನ್ನು ಆಕರ್ಷಿಸುವ ಅದಾವ ಶಕ್ತಿ ಸಿಹಿಗಿದೆ?
ಹುಟ್ಟುತ್ತಲೇ ಆಕರ್ಷಿಸಿದ ಅಮ್ಮನ ಹಾಲಿನ ಸಿಹಿರುಚಿ. ಹುಟ್ಟುಗುಣ ಸುಟ್ಟರೂ ಹೋಗಲ್ಲ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ಲಂಚಕ್ಕೆ ಕೈ ಒಡ್ಡದೆ ನೆರವೇರುವ ಸರ್ಕಾರಿ ಕೆಲಸ ಯಾವುದು?
ಸಮಯಕ್ಕೆ ಸರಿಯಾಗಿ ಸರ್ಕಾರಿ ಕಚೇರಿಯ ಬೀಗ ತೆಗೆಯುವುದು.

ಜಗದೀಶ ಬಿ ಹೊಸೂರು, ಮೈಸೂರು
ಸೀರಿಯಲ್‌ಗಳಲ್ಲಿ ತೋರಿಸುವಂತೆ ಎಲ್ಲರ ಮನೆಯಲ್ಲೂ ಖಳನಾಯಕ/ಕಿಯರು ಇದ್ದಾರಾ?
ಸಾಧ್ಯವಿಲ್ಲ. ಅವರಿಗೆ ಸಿಗುವಷ್ಟು ಸುಲಭವಾಗಿ ವಿಷ, ಗನ್, ಕೇಡುಬುದ್ಧಿ ನಿಜಜೀವನದಲ್ಲಿ ಸಿಗದು.

ನಿರುಕ್ತಾ, ಬೆಂಗಳೂರು
ಮಾನವತ್ವ ಎಂದರೇನು? ಅದು ಎಲ್ಲಿ ಸಿಗುತ್ತದೆ?
ಮಾನವತ್ವ ಎಂದರೆ 'ಹೊಸತನ ಬೇಡ' ಎಂದರ್ಥ. ಎಲ್ಲ ಧರ್ಮಕೋಟೆಗಳಲ್ಲೂ ಸಿಗುತ್ತದೆ.

ಪಿ. ಜಯವಂತ ಪೈ, ಕುಂದಾಪುರ
ಲವರ್‌ಗೂ, ಲಿವರ್‌ಗೂ ಏನು ವ್ಯತ್ಯಾಸ?
ಲವರ್‌ಅನ್ನು ಯಾರೂ ಡೊನೇಟ್ ಮಾಡುವುದಿಲ್ಲ.

ರಾಮಸ್ವಾಮಿ, ಭೀಮನಕಟ್ಟೆ
ಈಗಿನ ವರದಿಗಾರರು ಅಹ, 'ಸಶಷ'ಗಳನ್ನು ಒಂದೇ ರೀತಿ ಉಚ್ಚರಿಸುತ್ತಾರೆ. ಅಕ್ಷರಮಾಲೆಯ ಸಂಖ್ಯೆ ಇಳಿಸುವುದೊಳಿತೆ?
ಊರಲ್ಲಿ ಕೊಣಪರು ಹೆಚ್ಚಿದರೆಂದು ಶಿಖರದ ಕೋಡು ಕಡಿಯುವುದೆ? ಅಯೋಗ್ಯರ ಸಂಖ್ಯೆ ಇಳಿಸಿ.

## ವಾರದ ಪ್ರಶ್ನೆ

ರತ್ನಾ ಕೊರವರ, ಹೈದರಾಬಾದ್
ನಿದ್ರೆಯಲ್ಲಿ ಬಿದ್ದ ಕನಸುಗಳು ಅಪೂರ್ಣವಾಗಿಯೇ ಉಳಿದುಬಿಡುತ್ತವಲ್ಲ, ಏಕೆ?
ಕ್ಲೈಮಾಕ್ಸ್ ತಲುಪುವ ಹೊತ್ತಿಗೆ ಅಗಲವಾಗಿ ಕಣ್ಣು ಬಿಟ್ಟುಬಿಡುತ್ತೀವಲ್ಲ!

ಕಮರ್, ಮಡಿಕೇರಿ
ಶಾಲಾಕಾಲೇಜುಗಳ ಇಂದಿನ ಸ್ಥಿತಿಗತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?
ಸರಸ್ವತಿಯ ಸ್ಥಿತಿ ಎಂತಾದರೂ ಇರಲಿ, ಲಕ್ಷ್ಮಿ ಮೈಕೈ ತುಂಬಿಕೊಂಡು ಕಳೆಕಳೆಯಾಗಿದ್ದಾಳೆ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ
ಭೂಕಂಪನಕ್ಕೂ ಅನುಕಂಪಕ್ಕೂ ವ್ಯತ್ಯಾಸವೇನು ರಾಮ್?
ಅದು ಪತನದ ಪಥ; ಇದು ಜತನದ ಮತ.

ಬಾಲಸುರೇಶ್, ಬೆಂಗಳೂರು
ಸಪ್ತಪದಿಯಲ್ಲಿ ಕೈಹಿಡಿದು ಜೊತೆಗೆ ಹೋಗುವುದು, ನಂತರ ಹೆಂಡತಿಯ ಹಿಂದೆ ಹೋಗುವುದೇಕೆ?



ಸಪ್ತಪದಿಗೇ ಪುರೋಹಿತರ ನಿರ್ದೇಶನ ಮುಗಿದು ಹೆಂಡತಿಯ ಡೈರೆಕ್ಷನ್ ಶುರುವಾಗುವುದರಿಂದ.

ಎಂ.ವಿ. ಉಮಾ, ಬೆಂಗಳೂರು
ಊಟಕ್ಕೆ ಉಪ್ಪಿನಕಾಯಿ ಬೇಕು. ಜೀವನಕ್ಕೆ ಏನು ಬೇಕು?
ಅಹಂಕಾರ ಉಬ್ಬದಂತೆ ಕಾಯಬೇಕು.

ವಿ. ಹೇಮಂತಕುಮಾರ್, ಬೆಂಗಳೂರು
ಟ್ಯೂಬ್‌ಲೈಟ್‌ಗೆ ಕನ್ನಡದಲ್ಲಿ ಏನೆನ್ನುತ್ತಾರೆ?
ಮಿಣಕಮಿಣಕ ಫಳಕ್.

**ರಾಮ್**

ನೀವೂ ಪ್ರಶ್ನೆ ಕೇಳಿ: editorsu@sudha.co.in